# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 273
2. ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ
3. ಉತ್ತರಿಸಬೇಕಾದ ದಿನಾಂಕ : 06.07.2023
4. ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕೆ.ಆರ್.ಎಸ್ ನಲ್ಲಿ ಕಾವೇರಿ ಪ್ರತಿಮೆ ಮತ್ತು ಡಿಸ್ನಿಲ್ಯಾಂಡ್ ಮಾದರಿ ಉದ್ಯಾನ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: | ಹೌದು. |
| (ಆ) | ಇದು ಎಷ್ಟು ಮೊತ್ತದ ಯೋಜನೆ: ಈ ಯೋಜನೆಯನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಅನುಷ್ಠಾನ ಮಾಡಲಾಗುವುದೇ ಅಥವಾ ಸರ್ಕಾರವೇ ಬಂಡವಾಳ ಹೂಡಿಕೆ ಮಾಡುವುದೇ: (ಮಾಹಿತಿ ನೀಡುವುದು) | ಈ ಯೋಜನೆಯ ಅಂದಾಜು ಮೊತ್ತ ರೂ.1425.00 ಕೋಟಿಗಳಾಗಿದ್ದು, ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (Public-Private Partnership) ಮಾದರಿಯಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. |
| (ಇ) | ಈ ಯೋಜನೆಗೆ ಎಷ್ಟು ಎಕರೆ ಭೂಮಿ ಅವಶ್ಯಕತೆ ಇದೆ; ಎಷ್ಟು ಎಕರೆ ಸರ್ಕಾರಿ ಭೂಮಿ ಇದೆ ಹಾಗೂ ಎಷ್ಟು ಎಕರೆ ಭೂಮಿಯನ್ನು ಖಾಸಗಿಯಾಗಿ ಪಡೆಯಲು ಉದ್ದೇಶಿಸಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಯೋಜನೆಯ ಅನುಷ್ಠಾನಕ್ಕೆ 198 ಎಕರೆ ಭೂಮಿ ಅವಶ್ಯಕತೆ ಇದ್ದು, ಸದರಿ ಭೂಮಿಯು ಸರ್ಕಾರಿ ಸ್ವಾಮ್ಯದ್ದಾಗಿರುತ್ತದೆ. |
| (ಈ) | ಈ ಯೋಜನೆಯ ಅನುಷ್ಠಾನಕ್ಕಾಗಿ ಕಂಪನಿಗಳನ್ನು ಗುರುತಿಸುವ ಕೆಲಸ (ಟೆಂಡರ್ ಕರೆಯುವ) ಯಾವ ಹಂತದಲ್ಲಿದೆ: | ಪ್ರಸ್ತುತ ಯೋಜನಾ ವರದಿಯು ಅನುಮೋದನಾ ಪ್ರಕ್ರಿಯೆಯಲ್ಲಿರುವುದರಿಂದ, ಈ ಹಂತದಲ್ಲಿ ಕಂಪನಿಗಳನ್ನು ಗುರುತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| (ಉ) | ಯೋಜನಾ ವರದಿ ಮತ್ತು ಒಪ್ಪಂದ ಕುರಿತು ಆಗಿರುವ ಬೆಳವಣಿಗೆಗಳ ಕುರಿತು ಪೂರ್ಣ ಮಾಹಿತಿ ನೀಡುವುದು | ಯೋಜನಾ ವರದಿಯನ್ನು ಅನುಮೋದನೆಗಾಗಿ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗೆ ಸಲ್ಲಿಸಿದ್ದು, ಪಿಪಿಪಿ Project Appraisal Committee ಸಭೆಯಲ್ಲಿ Rapid Environmental Impact Assessment Study ಸಲ್ಲಿಸಲು ಹಾಗೂ ಕೆಲವು ಸಲಹೆಗಳನ್ನು ನೀಡುತ್ತಾ, ಮಾರ್ಪಾಡಿತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿರುತ್ತದೆ. ಅದರಂತೆ ಅನುಪಾಲನಾ ಕ್ರಮ ವಹಿಸಲಾಗುತ್ತಿದೆ.<br>ಈ ಹಿನ್ನೆಲೆಯಲ್ಲಿ ಯೋಜನೆಯ ಕುರಿತಂತೆ ಇದುವರೆಗೂ ಯಾವುದೇ ಒಪ್ಪಂದವಾಗಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಊ) | ಯೋಜನೆ ಅನುಷ್ಠಾನಕ್ಕಾಗಿ ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಸಚಿವಾಲಯದ ಸಹಮತಿ ಪಡೆದುಕೊಳ್ಳಲಾಗಿದೆಯೇ: ಅಥವಾ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ: (ಮಾಹಿತಿ ನೀಡುವುದು) | ಯೋಜನೆಯ ಅನುಷ್ಠಾನಕ್ಕಾಗಿ Rapid Environmental Impact Assessment ಗಾಗಿ Terms of Referenceನ ಅನುಮೋದನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |
| (ಋ) | ಕೆ.ಆರ್.ಎಸ್ ಹೊರತುಪಡಿಸಿ ಬೇರಡೆ ಡಿಸ್ನಿಲ್ಯಾಂಡ್ ಮಾದರಿ ಉದ್ಯಾನ ನಿರ್ಮಾಣ ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ? (ಇದ್ದಲ್ಲಿ ವಿವರ ನೀಡುವುದು) | ಇರುವುದಿಲ್ಲ. |

***ಸಂಖ್ಯೆ: ಜಸಂಇ 35 ಎನ್‌ಎಲ್‌ಎ 2023***

( ಡಿ. ಕೆ. ಶಿವಕುಮಾರ್ )
**ಉಪ ಮುಖ್ಯಮಂತ್ರಿಗಳು**